Akashvani: Bangalore
National Bulletin In Kannada
08.01.2026 : 13.10hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

08.01.2026 : 13.10hrs

********

**ಮುಖ್ಯಾಂಶಗಳು :**

1. ಸೋಮನಾಥ ಸ್ವಾಭಿಮಾನ ಪರ್ವ ಇಂದಿನಿಂದ ಆರಂಭ - ಪ್ರಧಾನಿ ನರೇಂದ್ರ ಮೋದಿ
2. ದೆಹಲಿಯ ಭಾರತ ಮಂಟಪದಲ್ಲಿ ನಾಳೆ ವಿಕಸಿತ ಭಾರತ ಯುವ ನಾಯಕರ ಸಂವಾದ
3. ರಕ್ಷಣಾ ಸಹಕಾರ ವಿಸ್ತರಣೆ ಸಂಬಂಧ ಶ್ರೀಲಂಕಾದೊಂದಿಗೆ ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಮಾತುಕತೆ
4. ೨೦೨೬ನೇ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಪ್ರಗತಿ ಶೇಕಡ ೭.೬ರಷ್ಟಾಗಲಿದೆ - ಮಾರ್ಗನ್ ಸ್ಟಾನ್ಲೇ ಸಂಸ್ಥೆ ಅಂದಾಜು

*********

ಸೋಮನಾಥ ಸ್ವಾಭಿಮಾನ ಪರ್ವ ಇಂದಿನಿಂದ ಆರಂಭವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸೋಮನಾಥದ ಮೇಲೆ ೧ ಸಾವಿರದ ೨೬ರಲ್ಲಿ ದಾಳಿ ನಡೆದು ಒಂದು ಸಾವಿರ ವರ್ಷ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ೨೦೨೬ನೇ ವರ್ಷವನ್ನು ಸ್ವಾಭಿಮಾನ ಪರ್ವವನ್ನಾಗಿ ಆಚರಿಸಲಾಗುತ್ತಿದೆ ಎಂದು ಪ್ರಧಾನಿಯವರು ತಮ್ಮ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ೧೯೫೧ರಲ್ಲಿ ಸೋಮನಾಥ ದೇವಾಲಯದ ಬಾಗಿಲುಗಳನ್ನು ಮರು ನಿರ್ಮಾಣ ಮಾಡಿ ೭೫ ವರ್ಷಗಳು ಪೂರ್ಣಗೊಂಡಿದೆ. ಅಂದಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು, ಮರು ನಿರ್ಮಾಣಗೊಂಡ ದೇವಾಲಯವನ್ನು ಅನಾವರಣಗೊಳಿಸಿದ್ದರು. ಭಾರತದ ಅತ್ಯಂತ ಪವಿತ್ರ ಯಾತ್ರಾ ಸ್ಥಳಗಲ್ಲಿ ಒಂದಾದ ಸೋಮನಾಥದ ಬಗ್ಗೆ ಜನರಿಗಿರುವ ಅಚಲ ನಂಬಿಕೆಯನ್ನು ಸ್ಮರಿಸಬೇಕಾದ ಐತಿಹಾಸಿಕ ಸಂದರ್ಭ ಇದಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ. ಈ ಮಧ್ಯೆ ಪ್ರಧಾನಮಂತ್ರಿಯವರು ತಾವು ಹಿಂದೆ ಸೋಮನಾಥ ದೇವಾಲಯಕ್ಕೆ ಭೇಟಿ ನಿಡಿದ್ದ

ಹಲವು ಚಿತ್ರಗಳನ್ನು ಹಂಚಿಕೊಂಡಿದ್ದು, ಜನರು ಸಹ #SomnathSwabhimanParv ದಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಂತೆ ಕರೆ ನೀಡಿದ್ದಾರೆ. ಇದೇ ೧೧ರಂದು ನಡೆಯಲಿರುವ ಸೋಮನಾಥ ಸ್ವಾಭಿಮಾನ ಪರ್ವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ.

*********

ದೆಹಲಿಯ ಭಾರತ ಮಂಟಪದಲ್ಲಿ ನಾಳೆ ವಿಕಸಿತ ಭಾರತ ಯುವ ನಾಯಕರ ಸಂವಾದ ೨೦೨೬ ನಡೆಯಲಿದೆ. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯಾ, ವಿಕಸಿತ ಭಾರತ ಯುವ ನಾಯಕರ ಸಂವಾದ ದೇಶದ ಯುವಶಕ್ತಿಯನ್ನು ಮುಂಚೂಣಿಗೆ ತಂದು ಸಬಲೀಕರಣಗೊಳಿಸಲಿದೆ. ಅವರು ನಿಜವಾದ ಸವಾಲುಗಳನ್ನು ಎದುರಿಸಲಿದ್ದಾರೆ ಮತ್ತು ಭಾರತ ಭವಿಷ್ಯಕ್ಕೆ ಕೊಡುಗೆ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ. ನಾಲ್ಕು ದಿನಗಳ ಈ ಸಂವಾದದಲ್ಲಿ ದೇಶದ ನಾನಾ ಭಾಗಗಳ ಯುವ ನಾಯಕರು ಪಾಲ್ಗೊಳ್ಳುತ್ತಿದ್ದು, ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಮಕ್ಷಮದಲ್ಲಿ ವಿಕಸಿತ ಭಾರತ ಕುರಿತಂತೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಭಾರತ ಇಡೀ ವಿಶ್ವದಲ್ಲೇ ಅತಿ ಹೆಚ್ಚಿನ ಯುವ ಜನಸಂಖ್ಯೆಯನ್ನು ಹೊಂದಿದೆ. ಭಾರತದ ಭವಿಷ್ಯವನ್ನು ಕೇವಲ ನೀತಿ ನಿರೂಪಣೆಗಳಿಂದ ರೂಪಿಸಲು ಸಾಧ್ಯವಿಲ್ಲ. ಯುವಜನತೆಯ ಕಲ್ಪನೆ, ಬದ್ಧತೆ ಮತ್ತು ಧೈರ್ಯದಿಂದ ಮಾತ್ರ ರೂಪಿಸಲು ಸಾಧ್ಯ. ಕಳೆದ ವರ್ಷ ಜನವರಿಯಲ್ಲಿ ಇಂತಹದ್ದೇ ಒಂದು ಸಂವಾದ ನಡೆದಿತ್ತು ಎಂದು ಮಾಂಡವೀಯಾ ಹೇಳಿದ್ದಾರೆ.

ಧ್ವನಿ : ಮನ್ಸುಖ್ ಮಂಡವೀಯಾ (೩೫ ಸೆಕೆಂಡ್‌ಗಳು)

*********

ಶ್ರೀಲಂಕಾ ಪ್ರವಾಸದಲ್ಲಿರುವ ಭಾರತೀಯ ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು, ಆ ದೇಶದ ರಾಜಕೀಯ ಮತ್ತು ಮಿಲಿಟರಿ ನಾಯಕತ್ವದೊಂದಿಗೆ ದ್ವಿಪಕ್ಷೀಯ ರಕ್ಷಣಾ ಸಹಕಾರ ವಿಸ್ತರಣೆ ಸಂಬಂಧ ಮಾತುಕತೆ ಮುಂದುವರೆಸಿದ್ದಾರೆ. ಪ್ರಾದೇಶಿಕ ಸುರಕ್ಷತೆ, ವೃತ್ತಿಪರ ಮಿಲಿಟರಿ ವಿನಿಮಯ ಹಾಗೂ ಶ್ರೀಲಂಕಾ ಸೇನೆಗೆ ನೆರವು ನೀಡುವ ಕುರಿತು ಅವರು

ಉನ್ನತಮಟ್ಟದ ಮಾತುಕತೆಗಳನ್ನು ನಡೆಸುತ್ತಿದ್ದಾರೆ. ದ್ವಿವೇದಿ ಅವರು, ಸಶಸ್ತ್ರ ಪಡೆಗಳು ರಾಷ್ಟ್ರ ನಿರ್ಮಾಣ ಮಾಡುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಲಿವೆ. ಹಾಗಾಗಿ ಆಧುನಿಕ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಉದಯೋನ್ಮುಖ ತಂತ್ರಜ್ಞಾನಗಳ ಬಳಕೆಗೆ ಒತ್ತು ನೀಡಬೇಕಾಗಿದೆ ಎಂದು ಹೇಳಿದ್ದಾರೆ. ಅವರ ಶ್ರೀಲಂಕಾ ಪ್ರವಾಸ ನಾಳೆ ಮುಕ್ತಾಯವಾಗಲಿದೆ.

*********

ಯೋಗದಿಂದ ಓಪಿಯಾಯ್ಡ್ ವಿಥ್‌ಡ್ರಾವಲ್ ಲಕ್ಷಣಗಳಿಂದ ಚೇತರಿಸಿಕೊಳ್ಳುವ ಸಮಯ ಅರ್ಧದಷ್ಟು ಕಡಿಮೆಯಾಗಲಿದೆ ಎಂಬ ಅಂಶವನ್ನು ನಿಮ್ಹಾನ್ಸ್‌ನ ಮಾದಕ ವ್ಯಸನ ಮುಕ್ತ ಕೇಂದ್ರದ ಸಂಶೋಧಕರು ತಮ್ಮ ಆವಿಷ್ಕಾರದಿಂದ ಕಂಡುಕೊಂಡಿದ್ದಾರೆ. ಪ್ರತಿಷ್ಠಿತ ಜಾಮಾ ಸೈಕಿಯಾಟ್ರಿ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಈ ಅಧ್ಯಯನದ ಅಂಶದಲ್ಲಿ ಔಷಧಿಯೊಂದಿಗೆ ಯೋಗಾಭ್ಯಾಸ ಮಾಡಿದ ರೋಗಿಗಳು ಕೇವಲ ೫ ದಿನಗಳಲ್ಲಿ ವಿಥ್‌ಡ್ರಾವಲ್ ಲಕ್ಷಣಗಳಿಂದ ಚೇತರಿಸಿಕೊಂಡಿದ್ದಾರೆ. ಆದರೆ ಔಷಧಿ ಮಾತ್ರ ತೆಗೆದುಕೊಂಡವರಿಗೆ ಚೇತರಿಸಿಕೊಳ್ಳಲು ೯ ದಿನಗಳು ಹಿಡಿದಿವೆ. ಯೋಗವು ದೇಹದ ಒತ್ತಡ ಪ್ರತಿಕ್ರಿಯೆಯನ್ನು ಶಾಂತಗೊಳಿಸುತ್ತದೆ ಎಂದು ಸಂಶೋಧನೆಯ ನೇತೃತ್ವ ವಹಿಸಿದ್ದ ನಿಮ್ಹಾನ್ಸ್‌ನ ಇಂಟಿಗ್ರೇಟಿವ್ ವೈದ್ಯಕೀಯ ವಿಭಾಗದ ಡಾ.ಹೇಮಂತ್ ಭಾರ್ಗವ್ ತಿಳಿಸಿದ್ದಾರೆ. ಈ ಆವಿಷ್ಕಾರವು ಮಾದಕ ವ್ಯಸನದಿಂದ ಬಳಲುತ್ತಿರುವ ಲಕ್ಷಾಂತರ ಜನರಿಗೆ ಹೊಸ ಭರವಸೆ ಮೂಡಿಸುತ್ತದೆ.

*********

ದೇಶದ ಆರ್ಥಿಕ ಪ್ರಗತಿ ರಾಷ್ಟ್ರೀಯ ಸಾಂಖಿಕ ಕಚೇರಿ-ಎನ್‌ಎಸ್‌ಒ ಮೊದಲು ಅಂದಾಜಿಸಿದ್ದಕ್ಕಿಂತಲೂ ಅಧಿಕವಾಗಲಿದೆ. ಕಳೆದ ಸೆಪ್ಟೆಂಬರ್‌ನಿಂದೀಚೆಗೆ ಕೈಗೊಂಡ ನೀತಿ ಸುಧಾರಣೆಗಳ ಪರಿಣಾಮ ಹೆಚ್ಚಿನ ಖರೀದಿ ಪ್ರಕ್ರಿಯೆ ನಡೆದಿದೆ. ಮಾರ್ಗನ್ ಸ್ಟಾನ್ಲೇ ಅಂದಾಜು ಮಾಡಿರುವಂತೆ ೨೦೨೬ನೇ ಹಣಕಾಸು ವರ್ಷದಲ್ಲಿ ಶೇಕಡ ೭.೬ರಷ್ಟು ಜಿಡಿಪಿ ಪ್ರಗತಿ ಸಾಧಿಸಲಿದೆ ಎಂದು ಅಂದಾಜಿಸಿದೆ. ಇದು ಎನ್‌ಎಸ್‌ಒ ಮೊದಲ ಅಂದಾಜಿಸಿದ್ದ ಶೇಕಡ ೭.೪ಕ್ಕಿಂತಲೂ ಅಧಿಕವಾಗಿದೆ. ಸರ್ಕಾರ ಕೈಗೊಂಡ ವಿತ್ತಿಯ ಮತ್ತು ಹಣಕಾಸು ನೀತಿ ಬೆಂಬಲದಿಂದಾಗಿ ಜನರ ಖರೀದಿ ಸಾಮರ್ಥ್ಯ ಹೆಚ್ಚಾಗಿ ಕಾರ್ಮಿಕ ಮಾರುಕಟ್ಟೆಯಲ್ಲಿ ಬದಲಾವಣೆಗಳಾಗಿವೆ.

*********

ನಿಯಂತ್ರಣ ಕ್ರಮಗಳನ್ನು ಪಾಲಿಸದ ೩೫ ಬ್ಯಾಂಕಿಂಗೇತರ ಹಣಕಾಸು ಕಂಪನಿಗಳ ಎನ್ ಬಿಎಫ್ ಗಳ ನೋಂದಣಿ ಪ್ರಮಾಣಪತ್ರಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದುಗೊಳಿಸಿದೆ. ಈ ಕಂಪನಿಗಳು ಇನ್ನು ಮುಂದೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ವ್ಯವಹಾರವನ್ನು ನಡೆಸಲು ಅನುಮತಿ ಇಲ್ಲ ಎಂದು ಆರ್‌ಬಿಐ ಹೇಳಿದೆ. ಯಾವುದೇ ಹಣಕಾಸಿನ ವಹಿವಾಟುಗಳನ್ನು ಕೈಗೊಳ್ಳುವ ಮೊದಲು ಹಣಕಾಸು ಸಂಸ್ಥೆಗಳ ನಿಯಂತ್ರಕ ಸ್ಥಿತಿಯನ್ನು ಪರಿಶೀಲಿಸಲು ಆರ್ ಬಿಐ ಸಾರ್ವಜನಿಕರಿಗೆ ಸೂಚನೆ ನೀಡಿದೆ.

*********

ಸೇನಾ ಸಿಬ್ಬಂದಿಗೆ ಬ್ಯಾಂಕಿಂಗ್ ಸೇವೆ ಒದಗಿಸುವುದು ಮತ್ತು ವೈಯಕ್ತಿಕ ಅಪಘಾತದಲ್ಲಿ ವಿಮೆ ಸೌಲಭ್ಯ ಒದಗಿಸುವ ಕುರಿತಂತೆ ಭಾರತೀಯ ಸೇನೆ ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕ್ ನಡುವೆ ಮಾಡಿಕೊಂಡಿದ್ದ ಒಪ್ಪಂದವನ್ನು ಮತ್ತೆ ಮೂರು ವರ್ಷಗಳ ಕಾಲ ಅಂದರೆ ೨೦೨೮ರವರೆಗೆ ನವೀಕರಿಸಲಾಗಿದೆ. ಈ ಒಪ್ಪಂದದಿಂದ ಅಗ್ನಿವೀರರು ಮತ್ತು ಪಿಂಚಣಿದಾರರು ಸೇರಿದಂತೆ ಹಾಲಿ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗೆ ಒಂದು ಕೋಟಿ ರೂಪಾಯಿವರೆಗೂ ವೈಯಕ್ತಿಕ ಅಪಘಾತ ವಿಮಾ ಸೌಲಭ್ಯ ದೊರಕಲಿದೆ.

*********

ಜಮ್ಮು ಮತ್ತು ಕಾಶ್ಮೀರದ ಕತುವಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಉಗ್ರರ ಅಡಗುದಾಣಗಳ ಮೇಲೆ ಶೋಧ ಕಾರ್ಯವನ್ನು ಇಂದು ಬೆಳಗಿನಿಂದ ಪುನರಾರಂಭಿಸಲಾಗಿದೆ. ನಿನ್ನೆ ಸಂಜೆ ಬಿಲ್ವಾರ್ ಪ್ರದೇಶದ ಕಹೋಗ್ ಗ್ರಾಮದಲ್ಲಿ ಸೇನಾಪಡೆಗಳು ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿತ್ತು. ಆಗ ಓರ್ವ ಭದ್ರತಾ ಅಧಿಕಾರಿ ಗಾಯಗೊಂಡಿದ್ದರು. ಆ ನಂತರ ಶೋಧ ಕಾರ್ಯವನ್ನು ಆರಂಭಿಸಲಾಗಿತ್ತು ಎಂದು ವಿಶೇಷ ಕಾರ್ಯಾಚರಣೆ ಗುಂಪಿನ ಅಧಿಕಾರಿ ತಿಳಿಸಿದ್ದಾರೆ. ಸೇನೆ, ಬಿಎಸ್‌ಎಫ್, ಪೊಲೀಸ್ ಹಾಗೂ ಸಿಆರ್‌ಪಿಎಫ್ ತುಕಡಿಗಳು ಗಡಿ ಪ್ರದೇಶದಲ್ಲಿ ನಿರಂತರ ಶೋಧ ಹಾಗೂ ಪತ್ತೆ ಕಾರ್ಯವನ್ನು ಮುಂದುವರಿಸಿದೆ. ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ಗಡಿಯಲ್ಲಿ ಶೋಧ ಕಾರ್ಯವನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ.

*********

೨೦೨೭ರ ಭಾರತದ ಜನಗಣತಿಯ ಮೊದಲ ಹಂತಕ್ಕೆ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಈ ವರ್ಷದ ಏಪ್ರಿಲ್ ೧ ರಿಂದ ಸೆಪ್ಟೆಂಬರ್ ೩೦ ರವರೆಗೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮನೆಗಳ ಪಟ್ಟಿ ಕಾರ್ಯಾಚರಣೆಗಳನ್ನು ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶವು ನಿರ್ದಿಷ್ಟಪಡಿಸಿದ ೩೦ ದಿನಗಳ ಅವಧಿಯಲ್ಲಿ ನಡೆಸಲಾಗುವುದು. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶವು ಸೂಚಿಸಿದ ವೇಳಾಪಟ್ಟಿಯ ಪ್ರಕಾರ, ಮನೆ-ಮನೆ ಮನೆಗಳ ಪಟ್ಟಿ ಆರಂಭವಾಗುವ ಮೊದಲು ೧೫ ದಿನಗಳ ಅವಧಿಗೆ ಸ್ವಯಂ-ಗಣತಿಗೆ ಅವಕಾಶ ಲಭ್ಯವಿರುತ್ತದೆ ಎಂದು ಗೃಹ ಸಚಿವಾಲಯ ತಿಳಿಸಿದೆ.

*********

ಈ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷವು ತನ್ನ ಸಿದ್ಧತೆಗಳನ್ನು ತೀವ್ರಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಇಂದಿನಿಂದ ಎರಡು ದಿನಗಳ ಪಶ್ಚಿಮ ಬಂಗಾಳ ಪ್ರವಾಸ ಕೈಗೊಳ್ಳಲಿದ್ದಾರೆ. ಅವರು ಈ ಭೇಟಿಯ ಸಮಯದಲ್ಲಿ, ಪಶ್ಚಿಮ ಬಂಗಾಳ ಘಟಕದ ಕೋರ್ ಕಮಿಟಿ ಸಭೆಯನ್ನು ನಡೆಸಲಿದ್ದಾರೆ ಮತ್ತು ಹಲವು ಜಿಲ್ಲಾ ಮಟ್ಟದ ಪಕ್ಷದ ನಾಯಕರೊಂದಿಗೆ ಸಂವಾದ ನಡೆಸಲಿದ್ದಾರೆ. ನಾಳೆ ನಡ್ಡಾ ಅವರು ತಮ್ಮ ಕೇಂದ್ರ ಸಚಿವಾಲಯಕ್ಕೆ ಸಂಬಂಧಿಸಿದ ಅಧಿಕೃತ ಸಭೆಗಳಲ್ಲಿ ಭಾಗವಹಿಸಲಿದ್ದಾರೆ.

*********

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ವಿಜಯ್ ಹಜಾರೆ ಟ್ರೋಫಿ ಎಲೈಟ್ ಎ ಗುಂಪಿನ ಪಂದ್ಯಾವಳಿಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿಂದು ಮಧ್ಯಪ್ರದೇಶದ ವಿರುದ್ಧ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡುತ್ತಿರುವ ಕರ್ನಾಟಕ, ೪೭.೪ ಓವರ್‌ಗಳಲ್ಲಿ ಎಲ್ಲಾ ವಿಕೆಟ್ ನಷ್ಟಕ್ಕೆ ೨೦೭ ರನ್ ಗಳಿಸಿದೆ.

*****END****